# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳಾದ ಚಡಚಣ, ಗೋಡಿಹಾಳ, ಲೋಣಿ.ಬಿ.ಕೆ., ಜಿರಕಳಗಿ, ಸಾತಲಗಾಂವ್, ದೇವರ ನಿಂಬರಗಿ, ಜಿಗಜೀವಣಗಿ ಹಾಗೂ ಇಂಚಗೇರಿ ಕೆರೆಗಳನ್ನು ಕೆರೆಗೆ ನೀರು ತುಂಬುವ ಯೋಜನೆಯಡಿ ಸಂಖ ಏತ ನೀರಾವರಿ ಮೂಲಕ ಅನುಷ್ಠಾನಗೊಳಿಸಿದ್ದು, ಸದರಿ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಗೆ ಮರು ಹಸ್ತಾಂತರಿಸುವ ಬಗ್ಗೆ.

**ಓದಲಾಗಿದೆ** : (1) ಸರ್ಕಾರದ ಆದೇಶ ಸಂಖ್ಯೆ: ಸನೀಇ 71 ಕೆಜಿದು 2008, ದಿನಾಂಕ:02/12/2009.

(2) ಸರ್ಕಾರದ ಆದೇಶ ಸಂಖ್ಯೆ:ಜಸಂಇ 306 ಕೆಬಿಎನ್ 2015, ದಿನಾಂಕ:09/03/2016.

(3) ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ಇವರ ಪತ್ರ ಸಂಖ್ಯೆ: ವ್ಯನಿ/ತಾಂ.ಸ-2/41/2019-20/2631 ದಿನಾಂಕ:22/10/2019.

**ಪ್ರಸ್ತಾವನೆ:**

ಮೇಲೆ ಓದಲಾದ(1)ರ ಸರ್ಕಾರದ ಆದೇಶದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ 20 ಸಣ್ಣ ನೀರಾವರಿ ಕೆರೆಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಹಸ್ತಾಂತರಿಸಲಾಗಿತ್ತು ಮತ್ತು ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ 8 ಕೆರೆಗಳಾದ ಚಡಚಣ, ಗೋಡಿಹಾಳ, ಲೋಣಿ.ಬಿ.ಕೆ., ಜಿರಕಳಗಿ, ಸಾತಲಗಾಂವ್, ದೇವರ ನಿಂಬರಗಿ, ಜಿಗಜೀವಣಗಿ ಹಾಗೂ ಇಂಚಗೇರಿ ಗಳಿಗೆ ಸಂಖ ಲಿಫ್ಟ್ (ಪ್ಯಾಕೆಜ್-4) ಮುಖಾಂತರ ಭೀಮಾ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (3)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರು ಸಂಖ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಕರಾರು ಒಪ್ಪಂದದಂತೆ ದಿನಾಂಕ:30/01/2018 ರಿಂದ 2 ವರ್ಷಗಳ ಅವಧಿಯವರೆಗೆ ಅಂದರೆ ದಿನಾಂಕ:29/01/2020 ರವರೆಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಿ ಸದರಿ ಯೋಜನೆಯ ಕೆರೆಗಳನ್ನು ಜಾಕ್ ವೆಲ್ ಮತ್ತು ಪೈಪ್ ಲೈನ್ ಸಿಸ್ಟಮ್ ನೊಂದಿಗೆ ಸಣ್ಣ ನೀರಾವರಿ ಇಲಾಖೆಗೆ ಹಿಂತಿರುಗಿಸಲು ಕೃಷ್ಣಾ ಭಾಗ್ಯ ಜಲ ನಿಗಮದ 102ನೇ ನಿರ್ದೇಶಕರ ಮಂಡಳಿಯ ಸೂಚನೆಯಂತೆ ಸಂಖ್ ಏತ ನೀರಾವರಿ ಯೋಜನೆ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರ ನಿರ್ವಹಣೆ ಅವಧಿಯು ದಿನಾಂಕ:29/01/2020ಕ್ಕೆ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ದಿನಾಂಕ:30/01/2020 ರಿಂದ ಹಸ್ತಾಂತರಿಸಲು ಸರ್ಕಾರದ ಆದೇಶ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ. ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಜಸಂಇ 68 ಕೆಬಿಎನ್ 2019, ಬೆಂಗಳೂರು ದಿನಾಂಕ: 12 /12/2019

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳಾದ ಚಡಚಣ, ಗೋಡಿಹಾಳ, ಲೋಣಿ.ಬಿ.ಕೆ., ಜಿರಕಳಗಿ, ಸಾತಲಗಾಂವ್, ದೇವರ ನಿಂಬರಗಿ, ಜಿಗಜೀವಣಗಿ ಹಾಗೂ ಇಂಚಗೇರಿ ಕೆರೆಗಳನ್ನು ಕೆರೆಗೆ ನೀರು ತುಂಬುವ ಯೋಜನೆಯಡಿ ಸಂಖ ಏತ ನೀರಾವರಿ ಮೂಲಕ ಅನುಷ್ಠಾನಗೊಳಿಸಿದ್ದು, ಕಾಮಗಾರಿ ನ್ರಿರ್ವಹಿಸಿದ ಗುತ್ತಿಗೆದಾರರ ನಿರ್ವಹಣೆ ಅವಧಿಯು ದಿನಾಂಕ:29/01/2020ಕ್ಕೆ ಪೂರ್ಣಗೊಂಡಿರುವುದರಿಂದ ದಿನಾಂಕ:30/01/2020 ರಿಂದ ಅನ್ವಯವಾಗುವಂತೆ ಸದರಿ ಕೆರೆಗಳನ್ನು ಜಾಕ್ ವೆಲ್ ಮತ್ತು ಪೈಪ್ ಲೈನ್ ಸಿಸ್ಟಮ್ ನೊಂದಿಗೆ ಸಣ್ಣ ನೀರಾವರಿ ಇಲಾಖೆಗೆ ಮರು ಹಸ್ತಾಂತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶ್ರೀಹರಿ ಎಸ್.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು(ಎ&ಇ)/(ಇ&ಆರ್ ಎಸ್ ಎ)/(ಜಿ&ಎಸ್ ಎನ್ ಎ), ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿಗಳು, ಸಣ್ಣ ನೀರಾವರಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಕೃಭಾಜನಿನಿ, ಕಾಲುವೆ ವಲಯ-2, ರಾಂಪೂರ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜ ಸಂ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು.
6. ಸರ್ಕಾರದ ಕಾರ್ಯದರ್ಶಿಗಳು, ಜ ಸಂ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜ ಸಂ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು.
8. ಶಾಖಾ ರಕ್ಷಕ ಕಡತ/ಹೆಚ್ಚಿನ ಪ್ರತಿಗಳು.